ಕಸ್ತೂರಿಯ ಬ್ಯಾಂಕಿನಲ್ಲಿ ಆಡಿಟಿಂಗ್ ನಡೆಯುತ್ತಿತ್ತು. ಯಾವತ್ತಿಗಿಂತಾ ತಡವಾಗಿ ಮನೆಗೆ ಬರುತ್ತಿದ್ದಳು ಕಸ್ತೂರಿ. ಕೆಲವು ಸಲ ರಾತ್ರಿ ಊಟದ ಹೊತ್ತಿಗೆ. ಎಂಟು ದಾಟಿ ಹೋಗಿರುತ್ತಿತ್ತು.

"ಇಷ್ಟೊತ್ತು ಎಂತಾ ಬ್ಯಾಂಕು? ಬಿಸಾಕಿ ಬರ್ಬೇಕಿತ್ತು..." ಭ್ರುಕುಟಿಗಳನ್ನು ಒಗ್ಗೂಡಿಸಿಕೊಂಡು ಅಸಮಾಧಾನ ಸೂಚಿಸುತ್ತಿದ್ದರು ಅತ್ತೆ ಸುವರ್ಣ. ರಾಜೀವ ತಟ್ಟನೆ ಹೆಂಡತಿಯನ್ನು ವಹಿಸಿಕೊಳ್ಳುತ್ತಿದ್ದ,

"ಇನ್ನೊಂದು ವಾರ ಅಮ್ಮಾ, ಅದೆಲ್ಲಾ ನಿಂಗೊತ್ತಾಗಲ್ಲ, ಸುಮ್ನಿದ್ಬಿಡು..."

ಹೀಗೊಂದು ಸಂದರ್ಭದ ಪುನರಾವರ್ತನೆಯ ನಿರೀಕ್ಷೆಯಲ್ಲಿ ಕಾಲಿಂಗ್‌ಬೆಲ್ ಒತ್ತಿದಳು ಕಸ್ತೂರಿ. ಬಾಗಿಲು ತೆಗೆದಿದ್ದು ಚಂಪಕಾ, ಕಸ್ತೂರಿಯ ವಾರಗಿತ್ತಿ.

"ಬಂದ್ಯಾ, ಬಾ. ಕರೆಕ್ಟ್ ಟೈಮಿಗೆ ಬಂದೆ. ಮೀಟಿಂಗ್ ನಡೀತಿದೆ..." 'ಏನು?' ಎಂದು ಕೇಳಬೇಕೆಂಬ ಉತ್ಸಾಹ ಕಸ್ತೂರಿಗಿರಲಿಲ್ಲ. ಮೀಟಿಂಗಿನ ಅಜೆಂಡಾ ಅವಳಿಗೆ ಗೊತ್ತಿದೆ. ಇನ್ನೆರಡು ದಿನಕ್ಕೆ ನಡೆಯಲಿರುವ ಮನೆಮಗಳ ಮೈದುನನ ಮದುವೆಗೆ ಹೋಗುವ ಸಿದ್ಧತೆ ಮನೆಯಲ್ಲಿ ಭರದಿಂದ ನಡೆಯುತ್ತಿದೆ. ದಿನಾ ಅದೇ ಪುರಾಣ. ಮೂರು ದಿನಗಳ ಭರ್ಜರಿ ಪ್ಲಾನು. 'ಎಲ್ಲಾ ಹೋಗೋಣ' ಎಂದು ಸುವರ್ಣನಿಗೆ ಕುತ್ತಿಗೆಯವರೆಗೆ ಆಸೆ. 'ಎಲ್ಲಾ ಅಂದರೆ ಕಸ್ತೂರಿಯನ್ನು ಹೊರತುಪಡಿಸಿ' ಎನ್ನುವ ಅವರ ಆಂತರ್ಯ ರಾಜೀವನಿಗೆ ಗೊತ್ತಿದೆ. ಈ ಸಲ ಅವಳನ್ನು ನಿವಾರಿಸಿಕೊಳ್ಳಲು ನೆವ ಹುಡುಕಬೇಕಾದ ಆವಶ್ಯಕತೆ ಸುವರ್ಣನಿಗೆ ಇಲ್ಲ. ಆಡಿಟಿಂಗ್ ನಡೆಯುತ್ತಿದೆ. ಕಸ್ತೂರಿ ಬಟ್ಟೆ ಬದಲಿಸಿ, ಕೈಕಾಲು ತೊಳೆದು ಹಾಲ್‌ಗೆ ಬರುತ್ತಿದ್ದಂತೆ ದೂರುವ ದನಿಯಲ್ಲಿ ಹೇಳಿದರು ಸುವರ್ಣ,

"ನಿನ್ನ ಗಂಡಂಗೆ ಸ್ವಲ್ಪ ಬುದ್ಧಿ ಹೇಳೇ. ತಂಗಿ ಮನೆಯ ಮದುವೆಗೆ ಇವನೇ ಬರದಿದ್ರೆ ಚೆನ್ನಾಗಿರುತ್ತಾ? ಏನಂದ್ಕಂತಾಳೆ ಸುಗಂಧಿನಿ? ನೀನಂತೂ ರಜಾ ಹಾಕೋ ಹಾಗಿಲ್ವಲ್ಲ?"

ರಾಜೀವನ ಕಡೆ ನೋಡಿದಳು ಕಸ್ತೂರಿ. ಅವನ ಮುಖದಲ್ಲಿ ಕಂಡೂಕಾಣದ ಅಸಹನೆಯ ಭಾವ.

"ಯಾಕೆ? ಯಾಕೆ ಬರಲ್ಲ ಅಂತಿದೀರಿ? ಹೋಗ್ಬನ್ನಿ..."

"ಮನೇಲಿ ನೀನೊಬ್ಬೇ ಇರಬೇಕಾಗುತ್ತೆ..."

"ಇರ್ತೀನಿ. ನಂಗೇನು ಹೆದರಿಕೆ ಇಲ್ಲ" 'ಇದೇನು ಹೊಸ್ತಾ?' ಎನ್ನುವ ಮಾತನ್ನು ತುಟಿ ಮೀರಿ ಹೊರ ಬರದಂತೆ ನುಂಗಿಕೊಂಡಳು ಕಸ್ತೂರಿ. ಅಮ್ಮ ಹಾಕಿದ ಗೆರೆ ದಾಟದೆ ಬೆಳೆದ ಗಂಡುಮಕ್ಕಳು. ಪ್ರಾಯಕ್ಕೆ ಬರುವ ಮೊದಲೇ ಅಪ್ಪನನ್ನು ಕಳೆದುಕೊಂಡು ಅಮ್ಮನ ಕಣ್ಣಂಕೆಯಲ್ಲಿ ಬೆಳೆದವರು. ಮನೆಯ ಸಕಲ ಜವಾಬ್ದಾರಿಗಳನ್ನೂ ಹೊತ್ತು ನಿಭಾಯಿಸಿ ಮಕ್ಕಳನ್ನೆಲ್ಲಾ ಒಂದು ದಡಕ್ಕೆ ತಂದು ನಿಲ್ಲಿಸಿದ ಅಮ್ಮನ ಬಗ್ಗೆ ಪ್ರೀತಿ, ಕೃತಜ್ಞತೆಯ ಭಾವನೆಗಳನ್ನು ಇಟ್ಟುಕೊಂಡವರು.

"ಸರಿ ಮತ್ತೆ. ಹೊರಡೋಕೆ ರೆಡಿ ಮಾಡ್ಕೋ. ಮೂರು ದಿನ ರಜಾ ಹಾಕಿದ್ರೆ ನಿನ್ನ ಬ್ಯಾಂಕು ಮುಳುಗಿ ಹೋಗಲ್ಲ..." ಕೊನೆಯ ಮಾತು ಹೇಳಿದರು ಸುವರ್ಣ. ಇದೇ ಮಾತನ್ನು ತನಗೆ ಹೇಳಲು ಅತ್ತೆಗೆ ನಾಲಿಗೆ ತಿರುಗಲಿಲ್ಲ ಎನ್ನುವುದನ್ನು ಅರಿತೂ ಅರಿಯದವಳಂತೆ ಕಸ್ತೂರಿ ಊಟಕ್ಕೆ ತಟ್ಟೆ ಇಡಲು ಒಳಗೆ ಹೋದಳು. ಬೇರೆ ಯಾರಿಗೆ